ಅಧ್ಯಕ್ಷರು:- ವಸತಿ ಮಂತ್ರಿಗಳು ಇಲ್ಲವೋ?

ಶ್ರೀ ಸಿ. ಭೈರೇಗೌಡ:- ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ಒದಗಿಸುವ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು:- ಅಲ್ಲಾ ಭೈರೇಗೌಡರೇ, ತಾವು ಬೇಸರ ಮಾಡಿಕೊಳ್ಳಬೇಡಿ. ಉತ್ತರ ನೀವು ಹೇಳುವುದು, ನಾನು ಮುಂದಕ್ಕೆ ಹೋಗುವುದು ಅದು ಬೇರೆ ವಿಷಯ. ಈ ರೀತಿಯ ಪ್ರವೃತ್ತಿ ಬಳ್ಳಿಯದಲ್ಲ. This is very bad ಅವರಿಗಿನ್ನೂ ಚಿಕ್ಕ ವಯಸ್ಸು, ಇಷ್ಟು ಹೊತ್ತು ಇಲ್ಲಿದ್ದರು, ಇರಬೇಕು, ಅಜೆಂಡಾದಲ್ಲಿ ಬಿಸಿನೆಸ್ ಲಿಸ್ಟ್ ಔಟ್ ಮಾಡಿದ್ದಾರೆ. He is responsible to answer the House ನೀವು ಉತ್ತರ ಕಳುಹಿಸಿಕೊಡಿ.

ಶ್ರೀ ಸಿ. ಭೈರೇಗೌಡ:- ಕ್ಷಮಿಸಬೇಕು, ತಾವು ಹೇಳುವಂಥ ಅಭಿಪ್ರಾಯಕ್ಕೆ ನನ್ನು ಸಂಪೂರ್ಣವಾದಂಥ ಸಹಮತ ಇದೆ.

ಬೆಂಗಳೂರು ನಗರದಲ್ಲಿ ಅಪಾರ್ಟಮೆಂಟ್ಸ್‌ಗಳಿಗೆ ಹೋಟೆಲ್‌ಗಳಿಗೆ, ಸಿನಿಮಾ ಮಂದಿರಗಳಿಗೆ, ಸರ್ಕಸ್ ಕಂಪನಿಗಳಿಗೆ ಪೆಟ್ರೋಲ್ ಬಂಕುಗಳಿಗೆ ಹಾಗೂ ಸೀಮೆ ಎಣ್ಣೆಅಂಗಡಿಗಳಿಗೆ ಪರವಾನಗಿ ನೀಡುವುದರ ಬಗ್ಗೆ.

ಶ್ರೀ ರಾಮಲಿಂಗೇಗೌಡ:- ಬೆಂಗಳೂರು ನಗರದಲ್ಲಿ ಅಪಾರ್ಟಮೆಂಟ್ಸ್‌ಗಳಿಗೆ, ಹೋಟೆಲ್, ಸಿನಿಮಾ ಮಂದಿರಗಳು, ಸರ್ಕಸ್ ಕಂಪನಿಗಳು, ಪೆಟ್ರೋಲ್ ಬಂಕ್ ಹಾಗೂ ಸೀಮೆಎಣ್ಣೆ ಅಂಗಡಿಗಳಿಗೆ ಅಗ್ನಿ ಶಾಮಕ ದಳದವರು ಪರವಾನಗಿಯನ್ನು ನೀಡುತ್ತಿದ್ದು, ಇದರಲ್ಲಿ ಬಹಳ ಅವ್ಯವಹಾರಗಳು ಆಗುತ್ತಿರುವುದು ತಿಳಿದು ಬಂದಿದೆ. ಪರವಾನಗಿಯನ್ನು ನೀಡಲು ಸಾಧ್ಯವಾಗದೇ, ಇರತಕ್ಕಂಥ ಸಂದರ್ಭಗಳಲ್ಲಿ ಪರವಾನಗಿಯನ್ನು ನೀಡುತ್ತಿರುವುದು ಕಂಡುಬಂದಿದೆ. ಡಿವಿಷನಲ್ ಫೈಲ್ ಆಫೀಸರ್ ರವರ ವರದಿ ಮೇಲೆ ಈ ಪರವಾನಗಿಯನ್ನು ನೀಡುತ್ತಿದ್ದು, ಇದನ್ನು ತಪ್ಪಿಸಿ, ಸರ್ಕಾರದ ಗೃಹ ಕಾರ್ಯದರ್ಶಿಗಳ ಮಟ್ಟದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವರದಿ ಆಧಾರದ ಮೇಲೆ ಪರವಾನಗಿಯನ್ನು ನೀಡುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕೋರುತ್ತೇನೆ.

ಶ್ರೀ ಖಿರಾಜುದ್ದೀನ್ ನಿಜಾಮುದ್ದೀನ್ ಪಾಟೀಲ್:- (ಅಗ್ನಿ, ಶಾಮಕ ದಳ, ಸೈನಿಕ ಕಲ್ಯಾಣ ಹಾಗೂ ಬಂಧೀಖಾನೆ ಸಚಿವರು), ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗೆ ಉತ್ತರ ರೂಲ್ಸ ಅಂಡ್ ರೆಗ್ಯೂಲೇಷನ್ಸ ಫಾಲೋ ಮಾಡುವಾಗ ಎಲ್ಲೆಲ್ಲಿ ತಪ್ಪು ಎಸಗಿ ಪರ್ಮಿಶನ್ ಕೊಟ್ಟಂಥವುಗಳಿವೆ, ಅವುಗಳನ್ನು ನಮಗೆ ತಿಳಿಸಿದರೆ ಅವರ ಬಗ್ಗೆ ನಾವು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ನಾವು ಅವರಿಗೆ ಭರವಸೆಯನ್ನು ಕೊಡುತ್ತೇವೆ.

ಮಂಗಳೂರಿನ ನಗರ ಪಾಲಿಕೆಗೆ ಕುಡಿಯುವ ನೀರಿನ ವ್ಯವಸ್ಥೆ.

ಅಧ್ಯಕ್ಷರು:- ಶ್ರೀ ಯೋಗೀಶ್ ಭಟ್,